ತಾರೀಖು 11ನೇ ಮಾರ್ಚಿ 1903.

ನಂ. ರೆ. 3602 ರೆ. ಫೈ. 10–1900, ದಿವಾನರವರ ಆಫೀಸಿನಲ್ಲಿ ಕೆಲಸ ಮಾಡುತ್ತಲಿರುವ ಅಸಿಸ್ಟೆಂಟ್ ಕಮಿಷ್ನರಾದ ಮೆ|| ಸಿ. ದೇವರಾಜೇ ಅರಸುನವರಿಗೆ, 1903ನೇ ಫೆಬ್ರವರಿ 5ನೇ ಮುಕ್ತಂ 3040ನೇ ನಂಬರ್ ಯೊಡನೆ ಆಜ್ಞೈರ್ ಆಗುವ ಇನ್ಸ್ಟ್ರಾಮೆಗಳಲ್ಲಿ ಕೊಟ್ಟಿದ್ದ ತಲಬಿಲ್ಲದ ಎಂಟು ತಿಂಗಳುಗಳ ಎಕ್ಸ್ಟ್ರಾ ಆರಡಿನೆರಿ ರಜಾ ಇನ್ನೂ ಬಂದು ತಿಂಗಳು ಜಾಸ್ತಿಮಾಡಲ್ಪಟ್ಟಿರುತ್ತದೆ.

ತಾರೀಖು 11ನೇ ಮಾರ್ಚಿ 1903.

ನಂ. ರೆ. 3608, ಸ್ಯ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ತುಮಕೂರು ತಾಲ್ಲೂಕಿನಲ್ಲಿರುವ ಯೋಗೇನಹಳ್ಳಿ ಗ್ರಾಮ ನಿವೇಶನವನ್ನು ಬಡಾಯಿಸುವ ಬಗ್ಗೆ ಬೇಕಾಗಿರುತ್ತದೆ. ಸದರಿ ರೆಗ್ಯುಲೇಷನಿನ 7ನೇ ಸೆಕ್ಷನ್ ಅನುಸರಿಸಿ ಹೆಪ್ಪುಟಿ ಕಮಿಷನರವರು ಸದರೀ ಜಮೀನನ್ನು ಹೊಂದುವಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಹಿಡುವಳಿದಾರರ ಹೆಸರು.	ಸರ್ವೆ ನಂ.	ಜಮೀನಿನ ವಿವರ ಮತ್ತು ವಿಸ್ತೀರ್ಣ. ಹುಲ್ಲು	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ. ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
ತುಮಕೂರು	ತುಮಕೂರು	ಯೋಗೇನಹಳ್ಳಿ	ಗೋಪಾಲಾಚಾರ್ರು	ಗೋಪಾಲಾಚಾರ್ರು	82	ಖುಷ್ಕಿ ಕೂ. ಎ. ಪೈ. 2—4—0 ತರಿ ಗು. ಎ. ಪೈ. 1—25—0	8 ಅಣೆ ಆಕಾರವುಳ್ಳ 35 ಗುಂಟೆಗಳು	ತುಮಕೂರು-ಹುದ್ದಗಿರಿ ರಸ್ತೆ	ಸರ್ವೆ ನಂ. 83	ಸರ್ವೆ ನಂ. 80	ತುಮಕೂರು—ಹುದ್ದಗಿರಿ ರಸ್ತೆ

ತಾರೀಖು 11ನೇ ಮಾರ್ಚಿ 1903.

ನಂ. 404—ಎಕ್ಸೈ. ಫೈ. 22–96, ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 188ನೇ ಆರ್ಟಿಕಲ್ ಅನುಸರಿಸಿ ತುಮಕೂರ ಎಕ್ಸೈಜ್ ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಾದ ಮೆ|| ವಿಸ್ರಿನಿಜಾ ಮುದ್ದೀ ಅಲಿಖಾ ಯವರಿಗೆ 1903ನೇ ಫೆಬ್ರವರಿ 25ನೇ ತಾರೀಖಿನಾರಭ್ಯ 13 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,
ಹೆಚ್. ವಿ. ನಂಜುಂಡಯ್ಯ,
ಜನರಲ್ ವ ರೆವಿನ್ಯೂ ಇಲಾಖೆಗಳ ಮೈಸೂರ ಗವರ್ನಮೆಂಟ್ ಸೆಕ್ರೆಟೆರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಟ್ರಾಮೆಂಟ್ಸ್.

ತಾರೀಖು 12ನೇ ಮಾರ್ಚಿ 1903.

ನಂ. 244—1381, ಫೈಂಬ್ರಾಕ್ಸ್ ಡಿವೀಜನ್ನಿನ ಎಗ್ಜಿಕ್ಯೂಟೀವ್ ಇಂಜನೀಯರಾದ ಮೆ|| ಡಿ. ರಂಗರಾಯರಿಗೆ ಮಾಕೇ ಮಜಕೂರು 12ನೇ ತಾರೀಖಿನ ಲಾಗಾಯತ್ತು ಯೂ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 14ನೇ ಮಾರ್ಚಿ 1903.

ನಂ. 251—1412, ಮಾರಿಕಣಿವೆ ಡಿವಿಜ್ಞಗೆ ಸೇರಿದ 3ನೇ ಕ್ಲಾಸ್ ಅಸಿಸ್ಟೆಂಟ್ ಇಂಜನೀಯರಾದ ಮೆ|| ಕೆ. ಅನಂತಾಚಾರ್ಯರವರಿಗೆ ಮಾಹೇ ಮಜಕೂರು 18ನೇ ತಾರೀಖಿನ ಲಾಗಾಯತ್ತು ಯ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕ್ಹಬರ್ಟ್,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನಮೆಂಟ್ ಸೆಕ್ರೆಟೆರಿ.